**ಓ.ಎಸ್ ನಂ. 86/2018** **ಡಿ.ಡಬ್ಲ್ಯೂ-3**

**ಸಾಕ್ಷಿಯನ್ನು ದಿನಾಂಕಃ 18.07.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ ಆರ್ ಕೆ ವಕೀಲರಿಂದಃ**

ನಾನು 1998 ರಿಂದ ನೋಟರಿಯಾಗಿ ಕೆಲಸ ಮಾಡುತ್ತಿದ್ದೇನೆ. ನೋಟರಿ ನಿಂಬಂದನೆಗಳಂತೆ ಹಕ್ಕು ಹಸ್ತಾಂತರ ಆಗುವಂತಹ ದಾಖಲಾತಿಗಳ ಮೇಲೆ ನಾನು ನೋಟರಿ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಆ ರೀತಿ ಇರುವುದಿಲ್ಲ ಸಾಮಾನ್ಯವಾಗಿ ಮಾಡುವುದಿಲ್ಲ ಎಂದು ನುಡಿಯುತ್ತಾರೆ. ನಿಡಿ 7 ರ ಪುಟ 1 ಮತ್ತು 2 ರಲ್ಲಿ ತಿದ್ದು ಪಡಿ ಮಾಡಿರುವ ಹಸ್ತ ಅಕ್ಷರ ನನ್ನದೇ ಆಗಿರುತ್ತದೆ. ಪ್ರಮಾಣ ಪತ್ರಗಳನ್ನು ನೋಟರಿಕರಿಸುವಾಗ ಆ ಪತ್ರಗಳ ಬಗ್ಗೆ ನಮ್ಮ ನೋಟರಿ ಪುಸ್ತಕದಲ್ಲಿ ಸಿರಿಯಲ್ ನಂಬರುಗಳನ್ನು ಬರೆಯುತ್ತೇವೆ ಎಂದರೆ ಸರಿ. ನಿಡಿ 7 ರಲ್ಲಿ ಸಿರಿಯಲ್ ನಂಬರು ಅನ್ನು ನಮೂದಿಸಿರುವುದಿಲ್ಲ ಎಂದರೆ ಪ್ರಮಾಣ ಪತ್ರಗಳಿಗೆ ಸಿರಿಯಲ್ ನಂಬರುಗಳನ್ನು ನೀಡುವ ಅಗತ್ಯ ಇರುವುದಿಲ್ಲ ಎಂದು ನುಡಿಯುತ್ತಾರೆ. ಪ್ರಮಾಣ ಪತ್ರಗಳಿಗೆ ಸಿರಿಯಲ್ ನಂಬರುಗಳನ್ನು ನೀಡುವ ಅಗತ್ಯ ಇರುವುದಿಲ್ಲ ಎಂದು ನೋಟರಿ ಕಾಯ್ದೆಗೆ ವಿರುದ್ದವಾಗಿ ಹೇಳಿಕೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ 7 ಅನ್ನು ಯಾರು ಬೆರಳಚ್ಚು ಎಲ್ಲಿ ಮಾಡಿಸಲಾಗಿರುತ್ತದೆ ಯಾರು ಮಾಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ನಿಡಿ 7 ಅನ್ನು ಯಾವ ದಾಖಲಾತಿಯ ಆಧಾರದ ಮೇಲೆ ಮಾಡಲಾಗಿರುತ್ತದೆ ಎಂದು ನಿಮಗೆ ತಿಳಿದಿರುವುದಿಲ್ಲ ಎಂದರೆ ಸಾಕ್ಷಿಯು ಅವರು ಪ್ರಮಾಣೀಕರಿಸಲು ನನ್ನ ಬಳಿ ಬಂದಿರುತ್ತಾರೆ ಅದರಂತೆ ಆ ದಾಖಲಾತಿಯನ್ನು ನಾನು ಪ್ರಮಾಣೀಕರಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಪತ್ರದಲ್ಲಿ ಉಲ್ಲೇಖಿಸಿರುವ ದಾಖಾಲತಿಗಳನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ನಿಡಿ 7 ರ 2 ನೇ ಪುಟದಲ್ಲಿ ಹೆಚ್ಚುವರಿಯಾಗಿ ಹಸ್ತಾಕ್ಷರದಲ್ಲಿ ಬರೆದಿರುವ ಮಾಹಿತಿಯನ್ನು ಸೋಂ ದೇವಿರವರು ಹೇಳಿದಂತೆ ನಾನು ಬರೆದಿರುತ್ತೇನೆ ಆ ಬಗ್ಗೆ ನಾನು ಯಾವುದೇ ದಾಖಲಾತಿಯನ್ನು ನೋಡಿರುವುದಿಲ್ಲ. ನಿಡಿ 7 (ಬಿ) ರಂತೆ ಸಹಿ ಮಾಡಿರುವ ಸೋರಂ ದೇವಿ ರವರ ಸಹಿ ಅದು ಸೋರಂ ದೇವಿ ರವರ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಡಿ 7 ರ ದಾಖಲಾತಿಯನ್ನು ಪ್ರಮಾಣೀಕರಿಸಿರುವ ಬಗ್ಗೆ ಪ್ರತಿಯನ್ನು ನಾನು ಇಟ್ಟು ಕೊಂಡಿರುವುದಿಲ್ಲ. ನಿಡಿ 7 ರ 1 ನೇ ಕೊನೆಯ ಪುಟದಲ್ಲಿ ನನ್ನಿಂದಗುರುತಿಸಿರುತ್ತಾರೆ ಎಂದು ಮಾಡಿರುವ ಸಹಿ ನನ್ನ ಸಮಕ್ಷಮ ಮಾಡಿರುವುದಿಲ್ಲ ಮತ್ತು ನಿಡಿ 7 ರಂತೆ ದಾಖಲಾತಿಯನ್ನು ನನ್ನ ಮುಂದೆ ಹಾಜರುಪಡಿಸಿದಾಗ ನಿಡಿ 7 (ಸಿ) ರಂತೆ ಸಹಿ ಮಾಡಿರಲಿಲ್ಲ. ನಿಡಿ 7 ರಲ್ಲಿ ದಿನಾಂಕ ಮತ್ತು ಸ್ಥಳ ನಮೂದಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ನಾನೇ ದಿನಾಂಕವನ್ನು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಹೆಚ್ ಡಿ ಕೋಟೆಗೆ 1989 ರಲ್ಲಿ

ಬಂದಿರುತ್ತೇನೆ. ನಿಡಿ 7 ಅನ್ನು  ಎನ್ ನಾಗರಾಜು ರವರಿಗೆ ಸಹಾಯ ವಾಗಲೀ ಎಂದು ನಾನು ಪ್ರಮಾಣೀಕರಿಸಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚರಣೆ ಇಲ್ಲಃ**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು

ಜೆ.ಎಂ.ಎಫ್.ಸಿ.,

ಹೆಚ್.ಡಿ.ಕೋಟೆ